ಆ) ಸದ್ರಿ ಸರ್ವೆ ನಂಬರಿನಲ್ಲಿ ಅನಧಿಕೃತ ಕಟ್ಟಡ ಕಟ್ಟಿದ್ದನ್ನು ಹುಜೂರು ಜಮಾಬಂದಿ ಸಮಯದಲ್ಲಿ ಪರಿಶೀಲಿಸಿ, ಹುಜೂರು ಜಮಾಬಂದಿಯ ಅಧಿಕಾರಿಗಳು ಅನಧಿಕೃತವಾಗಿ ಕಟ್ಟಡವನ್ನು ಕಟ್ಟಿಸಿದ ಅತಿಕ್ರಮಣದಾರರಿಗೆ ಸನ್ 1951ರಿಂದ 1980ರವರೆಗೆ ಸರ್ಕಾರಿ ಸುತ್ತೋಲೆ ಸಂಖ್ಯೆ:ಆರ್ ಡಿ 65 ಬಿಎಸ್‌ಪಿ 88 ದಿನಾಂಕ 19.5.1988 ಹಾಗೂ ಭೂ ಕಂದಾಯ ಕಾಯ್ದೆ 1964ರ ಕಲಂ 96(2) ರನ್ವಯ ಗರಿಷ್ಠ 1000-00 ರೂಪಾಯಿ ದಂಡ ವಿಧಿಸಿದ್ದು, ಮತ್ತು ಕರ್ನಾಟಕ ಪಬ್ಲಿಕ್ ಪ್ರಿಮಿಸಸ್ ಎವಿಕ್ಷನ್ ಆಫ್ ಅನಾಥರೈಸ್ಡ್ ಆಕ್ಯುಪೇಷನ್ ಆಕ್ಟ್ 1974ರ ಕಲಂ 4(1)ರನ್ವಯ ಸ್ಥಳವನ್ನು ತೆರವು ಮಾಡಲು ಸಕ್ಷಮ ಅಧಿಕಾರಿಗಳು ಆದೇಶವನ್ನು ಹೊರಡಿಸಿದ್ದರು. ಆದೇಶದ ವಿರುದ್ಧ ಅತಿಕ್ರಮಣದಾರರು ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆ ತಂದ ಪ್ರಯುಕ್ತ ಸದ್ಯ ಯಾವ ಕ್ರಮ ಕೈಗೊಂಡಿರುವುದಿಲ್ಲ. ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 2506ರಿಂದ 2544:90 ದಿನಾಂಕ 4.3.1996ರ ಆದೇಶದಲ್ಲಿ ಅತಿಕ್ರಮಣದಾರರು ಅರ್ಜಿಯನ್ನು ವಜಾ ಮಾಡಿರುತ್ತಾರೆ. ಪುನಃ ಅತಿಕ್ರಮಣದಾರರು ರಿಟ್ ಅಫೀಲು ಸಂಖ್ಯೆ 1467ರಿಂದ 1505:96ರ ಮುಖಾಂತರ ಮೇಲ್ಮನವಿ ಸಲ್ಲಿಸಿದ್ದು, ಅದಕ್ಕೆ ಉಚ್ಚ ನ್ಯಾಯಾಲಯವು 19.4.96ರಂದು ಪುನಃ ತಡೆಯಾಜ್ಞೆ ಜಾರಿ ಮಾಡಿರುತ್ತಾರೆ.

ಇ) 'ಆ' ನಲ್ಲಿ ನೀಡಿರುವ ಕಾರಣದಿಂದ ಮುಂದಿನ ಕ್ರಮ ಏಳಂಬವಾಗಿದೆ.

ವಿಷಯ:- ರಾಯಚೂರು ಜಿಲ್ಲೆಯಲ್ಲಿ ಬರ ಪರಿಹಾರಕ್ಕೆ (ಸ್ಕೇರ್‌ಸಿಟಿ) ಹಣ ಬಿಡುಗಡೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 263 (515)

ಶ್ರೀ ಕೆ.ವಿರೂಪಾಕ್ಷಪ್ಪ (ಸಿಂಧನೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಬರ ಪರಿಹಾರ ಯೋಜನೆಯಲ್ಲಿ ಸರ್ಕಾರದಿಂದ ರಾಯಚೂರು ಜಿಲ್ಲೆಗೆ ಬಿಡುಗಡೆಯಾದ ಹಣವೆಷ್ಟು?

2) ಅದರಲ್ಲಿ ತಾಲ್ಲೂಕುವಾರು ಹಂಚಿಕೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಬಾಗಿದ್ದಲ್ಲಿ, ಇದಕ್ಕೆ ಕಾರಣವೇನು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

95-96ನೇ ಸಾಲಿಗೆ ರಾಯಚೂರು ಜಿಲ್ಲೆಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೂ. 19.75 ಲಕ್ಷಗಳ ಅನುದಾನವನ್ನು ಅಭಾವ ಪರಿಹಾರ ಕಾರ್ಯಗಳಿಗಾಗಿ ಬಿಡುಗಡೆ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕುಡಿಯುವ ನೀರಿಗಾಗಿ 39 ಲಕ್ಷ ರೂ.ಗಳನ್ನು ಒದಗಿಸಿದೆ.

2) ವಿಕೋಪದ ತೀವ್ರತೆಯನ್ನು ಪರಿಗಣಿಸಿ, ಮೇಲಿನ ಅನುದಾನವನ್ನು ಕೆಳಕಂಡಂತೆ ತಾಲ್ಲೂಕುವಾರು ಹಂಚಿಕೆಯನ್ನು ಜಿಲ್ಲಾಧಿಕಾರಿಗಳು ಮಾಡಿರುತ್ತಾರೆ.

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಅಭಾವ ಪರಿಹಾರ ಕಾರ್ಯಕ್ರಮದ ಅಡಿಯಲ್ಲಿ ಹಂಚಿದ ಅನುದಾನ
1.	ರಾಯಚೂರು	35.08
2.	ಮಾನ್ವಿ	10.10
3.	ದೇವದುರ್ಗ	2.82
4.	ಲಿಂಗಸೂಗೂರು	17.95
5.	ಸಿಂಧನೂರು	24.51
6.	ಕುಷ್ಟಗಿ	16.90
7.	ಕೊಪ್ಪಳ	49.33
8.	ಗಂಗಾವತಿ	15.21
9.	ಯಲಬುರ್ಗಾ	39.21
	ಒಟ್ಟು	210.11

3) ಉದ್ಭವಿಸುವುದಿಲ್ಲ.

ವಿಷಯ:- ಆಶ್ರಯ ಯೋಜನೆಯ ಮನೆಗಳಿಗೆ ನೋಂದಣಿ ಶುಲ್ಕ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 265 (227)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಆಶ್ರಯ ಯೋಜನೆಯ ಮನೆಗಳ ನೋಂದಣಿ ಶುಲ್ಕವನ್ನು ಯಾವ ದಿನಾಂಕದಂದು ಯಾವ ಆದೇಶದಂತೆ ಮನ್ನಾ ಮಾಡಲಾಯ್ತು?

ಆ) ಈ ಆದೇಶ ಜಾರಿಯಾಗುವ ಹಿಂದಿನ ಆಶ್ರಯ ಮನೆಗಳಿಗೆ ಈ ಆದೇಶ ಅನ್ವಯವಾಗದೆ ನೋಂದಣಿ ಶುಲ್ಕ ಕಟ್ಟುವ ಪರಿಸ್ಥಿತಿ ಬಂದಿರುವುದು ಸರ್ಕಾರದ